ಓ.ಎಸ್.ನಂ.**247/2013**
ಡಿಡಬ್ಲ್ಯೂ **.1**

ಪ್ರಮಾಣ ವಚನ ಬೋಧಿಸಿದ ದಿನಾಂಕಃ **26.11.2024**
ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ ಜಿ.ಜೆ. ವಕೀಲರಿಂದ**

ನಾನು ಹಾಲಿ ಏಳುಪುರದಲ್ಲಿ ವಾಸ ಮಾಡುತ್ತಿದ್ದೇನೆ ಎಂದರೆ ಸರಿ. ನಾನು **2011–12** ರಿಂದ ಏಳುಪುರದಲ್ಲಿ ವಾಸ ಮಾಡುತ್ತಿದ್ದೇನೆ. ನನ್ನ ತಂದೆಗೆ ಇಬ್ಬರು ಗಂಡು ಮಕ್ಕಳು ಹಾಗೂ ಒಬ್ಬಳು ಹೆಣ್ಣು ಮಗಳಿದ್ದಾಳೆ. ನಾನು ನನ್ನ ತಂದೆ–ತಾಯಿ ಮತ್ತು ತಮ್ಮಂದಿರ ಜೊತೆ ವಾಸ ಮಾಡುತ್ತಿದ್ದೇನೆ ಎಂದರೆ ಸರಿ. ಸರ್ವೆ ನಂ.**41/1** ರ ಆಸ್ತಿಯು ವರದನಹಳ್ಳಿ ಗ್ರಾಮಕ್ಕೆ ಸೇರಿದ್ದು ಎಂದರೆ ಸರಿ. ಸದರಿ ಸರ್ವೆ ನಂಬರ್ ಒಟ್ಟು **4** ಎಕರೆ **21** ಗುಂಟೆ ವಿಸ್ತೀರ್ಣವಿದ್ದು, **10** ಗುಂಟೆ ಕರಾಬು ಸೇರಿಕೊಂಡಿದೆ ಎಂದರೆ ಸರಿ. ನನಗೆ ಏಳುಪುರದ ಎಂ.ಮುನಿಯಪ್ಪ ರವರ ಪರಿಚಯವಿದೆ. ನಾನು ಅವರನ್ನು ಹುಟ್ಟಿದಾಗ್ಗಿನಿಂದ ನೋಡಿರುತ್ತೇನೆ. ಅವರು ಏಳುಪುರದ ಮೂಲ ನಿವಾಸಿ ಎಂದರೆ ಸರಿ. ಸದರಿ ಎಂ.ಮುನಿಯಪ್ಪನವರಿಗೆ ಏಳುಪುರದಲ್ಲಿ ಸಾಕಷ್ಟು ಪಿತ್ರಾರ್ಜಿತವಾಗಿ ಬಂದ ಆಸ್ತಿಗಳು ಇದ್ದವು ಎಂದರೆ ಸರಿ. ಅವರ ಜೀವಿತಾ ಕಾಲದಲ್ಲಿ ಅವರು ಅವರಿಗೆ ಪಿತ್ರಾರ್ಜಿತವಾಗಿ ಬಂದ ಏಳುಪುರದ ಆಸ್ತಿಗಳನ್ನು ಮಾರಾಟ ಮಾಡಿದ್ದರು ಎಂದರೆ ಸರಿ. ಈ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇಲ್ಲ. ಸದರಿ ಮುನಿಯಪ್ಪನವರು ಏಳುಪುರದ ಪಿತ್ರಾರ್ಜಿತ ಆಸ್ತಿಗಳನ್ನು ಮಾರಾಟ ಮಾಡಿ ಬಂದ ಹಣವನ್ನು ದಾವಾ ಆಸ್ತಿಯನ್ನು ದಿನಾಂಕಃ**12.04.1984** ರಂದು ಅಶ್ವಥಮ್ಮರವರ ಕಡೆಯಿಂದ ಖರೀದಿಸಿದ್ದಾರೆ ಎಂದರೆ ಗೊತ್ತಿಲ್ಲ. ದಾವಾ ಆಸ್ತಿಯ ಪೈಕಿ **3** ಎಕರೆ **11** ಗುಂಟೆಯನ್ನು ಅಶ್ವಥಮ್ಮ ಮತ್ತು ಅವರ ಮಗಳು ಭಾರತಿ ಸೇರಿ ಎಂ.ಮುನಿಯಪ್ಪರವರಿಗೆ ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತು. ಸದರಿ ಆಸ್ತಿಯನ್ನು ಎಂ.ಮುನಿಯಪ್ಪನವರು ಖರೀದಿಸಿದ ನಂತರ ಅವರು

ಮತ್ತು ಅವರ ಹೆಂಡತಿಯು ಅದರ ಸ್ವಾಧೀನದಲ್ಲಿ ಇದ್ದರು ಎಂದರೆ ಸರಿ. ಮುನಿಯಮ್ಮ ಮತ್ತು ಅವರ ಹೆಂಡತಿಯು ಜೀವನಕ್ಕಾಗಿ ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿ.

ಎಂ.ಮುನಿಯಪ್ಪನವರು ಸರ್ವೆ ನಂ.**41/1** ರಲ್ಲಿ **1** ಎಕರೆಯನ್ನು ಪುನಃ ಅಶ್ವಥಮ್ಮ ಮತ್ತು ಅವರ ಮಗಳು ಭಾರತಿ ಕಡೆಯಿಂದ ಖರೀಸಿದ್ದಾರೆ ಎಂದರೆ ಸರಿ. ಪೂರ್ತಿ ದಾವಾ ಆಸ್ತಿಯನ್ನು ಎಂ.ಮುನಿಯಪ್ಪನವರು ಖರೀದಿಸಿದ ನಂತರ ಅವರು ಮತ್ತು ಅವರ ಹೆಂಡತಿಯರು ಸಂಪೂರ್ಣವಾಗಿ ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನೂ ಕೂಡ ಅವರ ಜೊತೆಯಲ್ಲಿ ಇದ್ದೆನು ಎಂದು ಹೇಳುತ್ತಾರೆ. ನಾನು ಮುನಿಯಪ್ಪನವರ ಜೊತೆ ವಾಸ ಮಾಡುತ್ತಿದ್ದೆನು ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ. ಅವರ ಜೊತೆ ವಾಸ ಮಾಡುತ್ತಿದ್ದೆನು ಎಂದು ತೋರಿಸಲು ಪಡಿತರ ಚೀಟಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ. ಆ ಸಮಯದಲ್ಲಿ ಮನೆಯಲ್ಲಿ ಎಷ್ಟು ಜನ ಸದಸ್ಯರು ಇರುತ್ತಾರೋ ಅವರೆಲ್ಲರ ಹೆಸರು ಮತದಾರರ ಪಟ್ಟಿಯಲ್ಲಿ ಒಟ್ಟಿಗೆ ನಮೂದಿಸುತ್ತಾರೆ ಎಂದರೆ ಸರಿ. ಸದರಿ ಮತದಾರರ ಪಟ್ಟಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ. ನಾನು ಮುನಿಯಪ್ಪನವರ ಜೊತೆ ಒಟ್ಟು ಕುಟುಂಬದಲ್ಲಿ ಇದ್ದೆನು ಎಂದು ತೋರಿಸಲು ನ್ಯಾಯಾಲಯಕ್ಕೆ ಮತದಾರರ ಪಟ್ಟಿಯನ್ನು ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ. ನಾನು ಮುನಿಯಪ್ಪನ ಕುಟುಂಬಕ್ಕೆ ಸೇರಿದವನಲ್ಲ ಹಾಗೂ ನಾನು ಅವರ ಜೊತೆ ಯಾವತ್ತಿಗೂ ಒಟ್ಟು ಕುಟುಂಬದ ಸದಸ್ಯನಾಗಿ ಇರಲಿಲ್ಲ ಎಂದರೆ ಸರಿಯಲ್ಲ.

ನನ್ನನ್ನು ಮುನಿಯಪ್ಪನವರೇ ಕರೆದುಕೊಂಡು ಹೋಗಿ ಅವರ ಮನೆಯಲ್ಲಿ ಇಟ್ಟುಕೊಂಡಿದ್ದರು. ಈ ಬಗ್ಗೆ ಏನಾದರೂ ಪತ್ರ ಮಾಡಿಕೊಂಡಿದ್ದಾರಾ ಎಂದರೆ ಇಲ್ಲ. ಮುನಿಯಪ್ಪನವರು ಯಾವತ್ತಿಗೂ ನನ್ನನ್ನು ಕರೆದುಕೊಂಡು ಹೋಗಿ ಸಾಕಿರಲಿಲ್ಲ ಹಾಗೂ ಅದರ ಅವಶ್ಯಕತೆ ಕೂಡ ಅವರಿಗೆ ಇರಲಿಲ್ಲ ಎಂದರೆ ಸರಿಯಲ್ಲ. **1**ನೇ ವಾದಿಯು ಮುನಿಯಪ್ಪನವರ ಮೊದಲನೇ ಹೆಂಡತಿ ಎಂದರೆ ಸರಿ. ಮೊದಲನೇ

ಹೆಂಡತಿಗೆ ಮಕ್ಕಳು ಇಲ್ಲದೇ ಇರುವ ಕಾರಣ ಹನುಮಕ್ಕ ರವರನ್ನು ಎರಡನೇ ಮದುವೆಯಾಗಿದ್ದರು ಎಂದರೆ ಸರಿ. **1** ಮತ್ತು **2**ನೇ ವಾದಿಯರು ಅನಕ್ಷರಸ್ಥರು ಎಂದರೆ **1**ನೇ ವಾದಿಯು ಅನಕ್ಷರಸ್ಥರಾಗಿದ್ದು, **2**ನೇ ವಾದಿಗೆ ಸ್ವಲ್ಪ ಬರೆಯಲು ಬರುತ್ತದೆ. **2**ನೇ ವಾದಿಯು ಸಹಿ ಮಾಡಿರುವಂತಹ ದಾಖಲೆಯನ್ನು ನಾನು ನೋಡಿದ್ದೇನೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. **1** ಮತ್ತು **2**ನೇ ಹೆಂಡತಿಗೆ ಮಕ್ಕಳಾಗದೇ ಇರುವ ಕಾರಣ ಮುನಿಯಪ್ಪನವರು **3**ನೇ ವಾದಿಯನ್ನು ಮದುವೆಯಾಗಿದ್ದರು ಎಂದರೆ ಸರಿ. **3**ನೇ ವಾದಿಯು **7**ನೇ ತರಗತಿಯ ತನಕ ಓದಿದ್ದಾರೆ ಹಾಗೂ ಅವರಿಗೆ ಓದಲು ಹಾಗೂ ಸಹಿ ಮಾಡಲು ಬರುತ್ತದೆ. ಮುನಿಯಪ್ಪನವರ ಜೀವಿತಾ ಕಾಲದಲ್ಲಿ ಅವರು ಮತ್ತು ಅವರ **3** ಜನ ಹೆಂಡತಿಯರು ದಾವಾ ಆಸ್ತಿಯನ್ನು ಒಟ್ಟಿಗೆ ಅನುಭವಿಸುತ್ತಿದ್ದರು ಎಂದರೆ ಸಾಕ್ಷಿಯು ಅವರ ಜೊತೆ ನಾನು ಕೂಡ ಅನುಭವಿಸುತ್ತಿದ್ದೆನು ಎಂದು ಹೇಳುತ್ತಾರೆ. ನಾನು ದಾವಾ ಆಸ್ತಿಯಲ್ಲಿ ಜಂಟಿ ಸ್ವಾ ಧೀನದಲ್ಲಿ ಇದ್ದೆ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ಮುನಿಯಪ್ಪನವರು **2007** ರಲ್ಲಿ ಮೃತಪಟ್ಟಿದ್ದಾರೆ ಎಂದರೆ ಸರಿ. ಮುನಿಯಪ್ಪನವರು ಮೃತಪಟ್ಟ ನಂತರ ವಾದಿಯರು ದಾವಾ ಆಸ್ತಿಯ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸಾಕ್ಷಿಯು ನಾನು ಕೂಡ ಅವರ ಜೊತೆಯಲ್ಲಿ ಸ್ವಾಧೀನ ಹೊಂದಿದ್ದೇನೆ ಎಂದು ಹೇಳುತ್ತಾರೆ. ಮುನಿಯಪ್ಪನವರು ಮೃತಪಟ್ಟ ನಂತರ ವಾದಿಯರೇ ಸ್ವಾಧೀನ ಹೊಂದಿ ಕಂ ಾದಯವನ್ನು ಕಟ್ಟುತ್ತಾ ಬಂದಿದ್ದು, ನಾನು ಯಾವತ್ತಿಗೂ ಸಹ ದಾವಾ ಆಸ್ತಿಯ ಸ್ವಾಧೀನವನ್ನು ಹೊಂದಿಲ್ಲ ಎಂದರೆ ಸರಿಯಲ್ಲ. ಮುನಿಯಪ್ಪನವರು ತಮ್ಮ ಜೀವಿತಾ ಕಾಲದಲ್ಲಿ ಕಟ್ಟಿದ ಮನೆಯಲ್ಲಿ ವಾದಿಯರು ವಾಸ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ಅದೇ ಮನೆಯಲ್ಲಿ ನಾನು ಮತ್ತು ನನ್ನ ತಮ್ಮ ವಾಸ ಮಾಡುತ್ತಿದ್ದೆವು ಎಂದು ಹೇಳುತ್ತಾರೆ. ಸದರಿ ಮನೆಯಲ್ಲಿ ನಾನು ವಾಸ ಮಾಡುತ್ತಿದ್ದೆನು ತೋರಿಸಲು ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿಲ್ಲ.

ಎಂ.ಮುನಿಯಪ್ಪನವರು ತಮ್ಮ ಜೀವಿತಾ ಕಾಲದಲ್ಲಿ ದಾವಾ ಆಸ್ತಿಯಲ್ಲಿ ಕೋಳಿ ಸಾಕಾಣಿಕೆಗಾಗಿ ಮೂರು ಶೆಡ್ಡ್ ಗಳನ್ನು ಕಟ್ಟಿಸಿದ್ದರು ಎಂದರೆ ಸಾಕ್ಷಿಯು ನಾನು ಕೂಡ ಸೇರಿ ಕಟ್ಟಿದ್ದೇನೆ ಎಂದು ಹೇಳುತ್ತಾರೆ. ಮೂರು ಶೆಡ್ಡ್ ಗಳಿಂದ ಒಟ್ಟು **15,000** ಕೋಳಿಗಳನ್ನು ಸಾಕುತ್ತಿದ್ದರು ಎಂದರೆ ಸಾಕ್ಷಿಯು ಒಟ್ಟು **14,500** ಕೋಳಿಗಳನ್ನು ಸಾಕುತ್ತಿದ್ದೆನು ಎಂದು ಹೇಳುತ್ತಾರೆ. ಮುನಿಯಪ್ಪನವರು ಮೃತಪಟ್ಟ ನಂತರ ವಾದಿಯರು ಸದರಿ ಶೆಡ್ಡ್ ಗಳನ್ನು ಬಾಡಿಗೆಗೆ ಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಮುನಿಯಪ್ಪನವರು ಇದ್ದಾಗ್ಗಿನಿಂದ ಪಾಯನೀಯರ್ ಕಂಪನಿಗೆ ಬಾಡಿಗೆಗೆ ಕೊಟ್ಟಿದ್ದರು ಎಂದು ಹೇಳುತ್ತಾರೆ. ಈ ಬಗ್ಗೆ ದಾಖಲೆ ಕೊಟ್ಟಿದ್ದೀರಾ ಎಂದರೆ ಇಲ್ಲ. ಮುನಿಯಪ್ಪನವರು ತಮ್ಮ ಜೀವಿತಾ ಕಾಲದಲ್ಲಿ ಅವರೇ ಮೂರು ಶೆಡ್ಡ್ ಗಳಲ್ಲಿ ಇರುವ ಕೋಳಿಗಳನ್ನು ನೋಡಿಕೊಳ್ಳುತ್ತಿದ್ದರು, ಅವರು ಮೃತಪಟ್ಟ ನಂತರ ವಾದಿಯರು ಶೆಡ್ಡ್ ಗಳನ್ನು ಬಾಡಿಗೆಗೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಾನು ವಾದಿಯರು ಮತ್ತು ಮುನಿಯಪ್ಪನವರ ಜೊತೆ ಇದ್ದೆನು ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ. ಮುನಿಯಪ್ಪನವರಿಗೆ ವಾದಿಯರನ್ನು ಹೊರತುಪಡಿಸಿ ಬೇರೆ ಯಾರೂ ವಾರಸ್ಸುದಾರರಿಲ್ಲ ಎಂದರೆ ಸರಿಯಲ್ಲ. ಆದರೆ ನಾನು ಅವರ ವಾರಸ್ಸುದಾರನಿದ್ದೇನೆ.

ಮುನಿಯಪ್ಪನವರಿಗೆ ಒಟ್ಟು ಮೂರು ಜನ ಅಣ್ಣ-ತಮ್ಮಂದಿರು. ಮುನಿಯಪ್ಪನವರ ತಂದೆಗೆ ಒಟ್ಟು **3** ಗಂಡು ಮಕ್ಕಳು ಹಾಗೂ **4** ಹೆಣ್ಣು ಮಕ್ಕಳಿರುತ್ತಾರೆ. ಮುನಿಯಪ್ಪನವರ ತಂದೆಗೆ ಪಿತ್ರಾರ್ಜಿತವಾಗಿ ಒಟ್ಟು ಎಷ್ಟು ಆಸ್ತಿಗಳು ಬಂದಿದ್ದವು ಎಂದರೆ ಗೊತ್ತಿಲ್ಲ. ಮುನಿಯಪ್ಪನ ತಂದೆಗೆ ಯಾವುದೇ ಸ್ವಯಾರ್ಜಿತ ಆಸ್ತಿ ಇರಲಿಲ್ಲ ಎಂದರೆ ಗೊತ್ತಿಲ್ಲ. **1984** ರಲ್ಲಿ ಮುನಿಯಪ್ಪನವರು ದಾವಾ ಆಸ್ತಿಯನ್ನು ಖರೀಸಿದ ಸಮಯದಲ್ಲಿ ನಾನು ಹುಟ್ಟಿರಲಿಲ್ಲ ಎಂದರೆ ಸರಿಯಲ್ಲ. ನನಗೆ **1984** ರಲ್ಲಿ ಮುನಿಯಪ್ಪನವರು ಯಾರ ಕಡೆಯಿಂದ ಹಾಗೂ ಎಷ್ಟು ಹಣಕ್ಕೆ ದಾವಾ ಆಸ್ತಿಯನ್ನು

ಖರೀದಿಸಿದ್ದಾರೆ ಎಂಬ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಮುನಿಯಪ್ಪನ ಇಬ್ಬರು ತಮ್ಮಂದಿರು ಏಳ್ಳುಪುರದಲ್ಲಿ ವಾಸ ಮಾಡುತ್ತಿದ್ದಾರೆ.

**ಮುಂದುವರೆದ ವಾಟೀ ಸವಾಲುಃ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.